At Ranjit
From 2-8-46
RATNAVALI
ರತ್ನಮಾಲಾ — ಸುರೇಂದ್ರ
— ಪಾತ್ರವಹಿಸಿರುವ —
ರತ್ನಾವಳಿ

Regd. No. M 1299 SATYAVADI Founded 1917

# ಸತ್ಯವಾದಿ
SATYAVADI

(ಅರಮನೆ ಸಿರಸ್ತೇದಾರ್ ಎಂ. ವಿ. ಸುಬ್ಬರಾಯುಡಿಂದ ಸ್ಥಾಪಿಸಲ್ಪಟ್ಟುದು)

ಸಂಪುಟ 29 ಸಂಚಿಕೆ 263 | ಶನಿವಾರ 3-8-46 | ಬಿಡಿ ಪ್ರತಿ 3 ಪೈ

At Opera
From 3-8-46
Bhakta Kalathi
ಹೊನ್ನಪ್ಪ ಭಾಗವತರ್, ತತಮಣಿ
ಕೃಷ್ಣ, ಮಧುರಂ
ಪಾತ್ರವಹಿಸಿರುವ
ಭಕ್ತ ಕಲಾತಿ

# ಭಾರತ ಸ್ವಾತಂತ್ರ್ಯಕ್ಕೆ ಟಾರಿಗಳ ವಿರೋಧ!

## ವಿಶ್ವಕರ್ಣಾಟಕ ಪತ್ರಿಕೆ

ಬೆಂಗಳೂರು ಆ 2 — ಭಾರತ ರಕ್ಷಣಾ ಶಾಸನಾನ್ವಯ 'ವಿಶ್ವಕರ್ಣಾಟಕ' ದೈನಿಕವು ಎರಡು ತಿಂಗಳ ಕಾಲ ಪ್ರಕಟಣೆಯಿಂದ ಪ್ರತಿಬಂಧಿಸಲ್ಪಟ್ಟಿದೆ ಜುಲೈ 31 ರಲ್ಲಿ ಪ್ರಕಟವಾದ 'ಅನಾಮಧೇಯ ಪತ್ರ' ಮತ್ತು ಆಗಸ್ಟ್ 1 ರಲ್ಲಿ ಪ್ರಕಟವಾದ 'ಮಾಡಿದ್ದುಣ್ಣೋ ಮಹರಾಯ' ಎಂಬ ಅಗ್ರಲೇಖನಗಳೇ ಇದಕ್ಕೆ ಕಾರಣ. 'ಮಾಡಿದ್ದುಣ್ಣೋ ಮಹರಾಯ' ಲೇಖನದ ಪ್ರತಿಗಳು ಭಾರತ ರಕ್ಷಣಾ ಕಾನೂನಿನ ಪ್ರಕಾರ ಮುಟ್ಟುಗೋಲು ಹಾಕಿಕೊಳ್ಳಲ್ಪಟ್ಟಿದೆ.

ಪ್ರತಿಬಂಧಕದ ವಿಷಯದಲ್ಲಿ ಶ್ರೀ ಶರ್ಮರು ಹೇಳಿಕೆಯಿತ್ತಿರುವರು.

### ತುರುತು ಸಭೆ

ವಿಶ್ವಕರ್ಣಾಟಕ ಪತ್ರಿಕೆ ಮೇಲಿನ ಪ್ರತಿಬಂಧಕವನ್ನು ಪರಿಶೀಲಿಸಲು ನಾಳೆ ಸಂಜೆ 6 ಗಂಟೆಗೆ ಮೈಸೂರು ಸಂಸ್ಥಾನ ಪತ್ರಿಕೋದ್ಯೋಗಿ ಸಂಘದ ವಿಶೇಷ ಸಭೆ ಸೇರುವುದು.

## ಸರ್ಕಾರದ ಸಹಾಯ

ಬೆಂಗಳೂರು ಆ 2 — ಖಾಸಗೀ ಇಂಟರ್ ಕಾಲೇಜುಗಳಿಗೆ ತಾತ್ಕಾಲಿಕ ವರ್ಷಾಡಿನಂತೆ 2 ವರ್ಷಕ್ಕೆ ಒಂದಾವರೂ 11 ಸಾವಿರ ಸರ್ಕಾರಿ ಸಹಾಯ ದ್ರವ್ಯ ಸಿಗುವುದು.

## ಖಂಡನಾ ಸಭೆ

ಮೈಸೂರು, ಆ 3 — ಈ ಸಂಜೆ 7 ಗಂಟೆಗೆ ವಿಶ್ವಕರ್ಣಾಟಕ ಪತ್ರಿಕೆಯ ಪ್ರತಿಬಂಧಕ ಖಂಡಿಸುವ ಸಲುವಾಗಿ ಇಲ್ಲಿಯ ಪತ್ರಿಕೋದ್ಯೋಗಿ ಸಂಘ ಸಭೆ ಸೇರುವುದು.

## ವಿವಿಧ ವರ್ತಮಾನ

ಬೆಂಗಳೂರು ಆ 1 — ನಡೆದ ಸೆಂಟ್ರಲ್ ಮುಸ್ಲಿಂ ಅಸೋಸಿಯೇಷನ್ನಿನ ಸಭೆಯಲ್ಲಿ ನಿವೃತ್ತ ಮತ್ತು ನೂತನ ದಿವಾನರುಗಳನ್ನು ಅಭಿನಂದಿಸುವ ನಿರ್ಣಯವಾಯಿತು.

ಂ ಂ

ನ್ಯೂಯಾರ್ಕ್ ಜುಲೈ 29— ಹಿಂದೆ ಕೈಸರ್ ಚಕ್ರವರ್ತಿಯ ಸಹೋದರರಿಗೆ ಸೇರಿದ ರೂ. 2 ಕೋಟಿ ಬಾಳುವ ರತ್ನಾಭರಣಗಳನ್ನು ಒಬ್ಬ ಅಮೇರಿಕ ಅಧಿಕಾರಿಯು ಅಪಹರಿಸಿರುವನೆಂದು ಹೇಳಲಾಗಿದೆ.

ಕೆ ಂ

ಪೂನಾ ಆ 1 — ಇದುವರೆಗೆ 259 ನಿಮ್ನ ವರ್ಗದ ಸತ್ಯಾಗ್ರಹಿಗಳು ದಸ್ತಗಿರಿಯಾಗಿದ್ದರು. 70 ಮಂದಿ ಕ್ಷಮಾಪಣೆ ಕೇಳಿದೆ ಪ್ರಯುಕ್ತ ಬಿಡುಗಡೆ ಮಾಡಲ್ಪಟ್ಟರು.

ಂ ಂ

ಮೈಸೂರು ಆ 2 — ಮೈಸೂರು ಕಾಂಗ್ರೆಸ್ ಅಧ್ಯಕ್ಷ ಚುನಾವಣೆಯಲ್ಲಿ ಶ್ರೀ ಟಿ. ಸಿದ್ಧಲಿಂಗಯ್ಯನವರಿಗೆ 211 ಓಟುಗಳೂ ಶ್ರೀ ಕೆ. ಚಂಗಲರಾಯರೆಡ್ಡಿಯವರಿಗೆ 293 ಓಟುಗಳೂ ಬಂದು ಅವರೇ ಅಧ್ಯಕ್ಷ ಪದವಿಗೇರಿದರು.

ಂ ಂ

ಬೊಂಬಾಯಿ ಆ 2 — ಇಲ್ಲಿ ನಡೆದ ಸಂಧಾನದ ಫಲವಾಗಿ ಇಂಡಿಯಾ ಸರ್ಕಾರ ರಿಯಾಯಿತಿಗೆ ಅಂಗೀಕರಿಸಿದ್ದರಿಂದ 23 ದಿನಗಳ ಅಂಚೆ ಮಹಾ ಮುಷ್ಕರ ಮುಕ್ತಾಯವಾಯಿತು.

ಂ ಂ

ನವದೆಹಲಿ ಜು 31— ಮುನಿಸಿಪಲ್ ಗುಡಿಸುವವರ ಮುಷ್ಕರ ನಡೆಯುತ್ತಿದೆ-ಲ್ಲೂರೆಲ್ಲಾ ಗಲೀಜು ತುಂಬಿದೆ. ನೈಸಾರಕ ಭಾಗದಲ್ಲಿ ಸ್ವಯಂಸೇವಕರು ಗುಡಿಸಿದರು. ಮುಷ್ಕರ ಸಮಿತಿ ಕಾರ್ಯದರ್ಶಿ ಶ್ರೀ ನಂದರು ದಸ್ತಗಿರಿ ಮಾಡಲ್ಪಟ್ಟಿದ್ದಾರೆ.

## ಜೀವನ ಪಥ

ಪ್ರಪಂಚದ ಅನುಜ್ಞೆಯಿಲ್ಲದೆಯೇ ಮನುಷ್ಯನು ಪ್ರಪಂಚದಲ್ಲಿ ಜನಿಸುತ್ತಾನೆ. ಪುನಃ ತನ್ನ ಬಯಕೆಗೆ ವಿರುದ್ಧವಾಗಿಯೇ ಪ್ರಪಂಚವನ್ನು ಬಿಡುತ್ತಾನೆ. ಆತನ ಉದ್ದೇಶಗಳನ್ನು ಪ್ರಪಂಚವು ಸರಿಯಾಗಿ ಗ್ರಹಿಸಲಾರದು. ಬಾಲ್ಯದಲ್ಲಿ ಅವನೊಬ್ಬ ದೇವತೆ. ಯೌವನದಲ್ಲಿ ಅವನೊಬ್ಬ ಪೂರ್ಣ. ಹೆಂಡರು ಮಕ್ಕಳೊಂದಿಗೆ ಸಂಸಾರ ಮಾಡುತ್ತಿರುವನೊಬ್ಬ ಪೊದ್ದ. ಬ್ರಹ್ಮಚಾರಿಯಾಗಿದ್ದರೆ ಗಂಡಸೇ ಅಲ್ಲ ಕಾಫೀ ಹೋಟಲುಗಳಲ್ಲಿ ಕಾಲಿಟ್ಟರೆ ಕುಡುಕ. ಇಲ್ಲವಿದ್ದಲ್ಲಿ ಲೋಫಿ. ಅವನಿಗೆ ಮೆದಳಿನ ಶಕ್ತಿ ಇದ್ದಲ್ಲಿ ಬುದ್ಧಿವಂತನೇ ಆಗಲಿ ಮೋಸಗಾರ. ಗುಡಿಗೆ ಹೋದರೆ ಅವನು ವೇಷಧಾರಿ ಭಕ್ತ ಹೋಗದಿದ್ದರೆ ಪಾಪಿ ದಾತನಾದಲ್ಲಿ ಅದು ಪ್ರಚಾರದ ಸಲುವಾಗಿ. ದಾತನಲ್ಲದಿದ್ದಲ್ಲಿ ಅವನು ಪರಮ ಲೋಭಿ. ಸೀಜ ಪ್ರಪಂಚಕ್ಕೆ ಬಂದಾಗ ಅವನನ್ನು ಪ್ರತಿಯೊಬ್ಬನೂ ಮುತ್ತಿಡುತ್ತಾನೆ. ಸಾಯುವುದಕ್ಕೆ ಮುಂಚೆ ಪ್ರತಿಯೊಬ್ಬನೂ ಅವನನ್ನು ಹೊಡೆಯಹೋಗುತ್ತಾನೆ. ಚಿಕ್ಕಂದಿನಲ್ಲಿಯೇ ಸತ್ತು ಹೋದವನಿಗೆ, ಅವನು ಸಾಯದೇ ಇದ್ದಿದ್ದಲ್ಲಿ ಭವಿಷ್ಯವು ಬಹಳ ಶೋಭಾಯಮಾನವಾಗುತ್ತಿತ್ತು. ವೃದ್ಧಾವಸ್ಥೆಯು ಬರುವರೆಗೆ ಜೀವಿಸಿಕೊಂಡಿದ್ದಲ್ಲಿ ಅವನು ಬಹುಶಃ ವೀಲುನಾಮೆಯನ್ನು ಒರೆದೇ ಇಟ್ಟುಂಬಹುದೆಂದೆಂದುಕೊಳ್ಳುತ್ತಾರೆ. .... .... (ಓಂ)

Get Medical Diplomas
At home : — Ayurvedic Homeopathic, Unani, etc Prospectus Free.
Old Indian Medical College
Kotgarh, Simla

## ಯೋಗಿ ಜಿನ್ನಾ!

**ಲಾಹೋರ್, ಆ ೧ — ಜಿನ್ನಾರವರು ಖಾಲೀ ನೆಲದ ಮೇಲೆ ಆಗಾಗ ಮಲಗಿಕೊಳ್ಳುತ್ತಿದ್ದಾರೆ. ಜೈಲುವಾಸದ ಕಷ್ಟಗಳಿಗೆ ತಯಾರಾಗುತ್ತಿರುವಂತಿದೆ. ಇದುವರೆವಿಗೂ ಆತ ಬಂದೀಖಾನೆ ವಾಸವನ್ನು ಅನುಭವಿಸಿಲ್ಲ.**

## ಹೊಸಹೊಸ ಸುದ್ದಿ

ಲಂಡನ್ ಜು 31— ಬ್ರಿಟಿಷ್ ಸೋಲ್ಜರುಗಳು ಪರದೇಸೀ ಹೆಂಗಸರನ್ನು (ಜಪಾನೀ ಸ್ತ್ರೀಯರನ್ನು ಬಿಟ್ಟು) ಮದುವೆಯಾಗಬಹುದೆಂದು ಹೇಳಲಾಗಿದೆ.

ಂ ಂ

ಲಂಡನ್, ಆ 1 — ಗ್ರೇಟ್‌ಬ್ರಿಟನ್ನಿನ ಕನ್ಸರ್ವೆಟೀವ್ ನ್ಯಾಷನಲ್ ಯೂನಿಯನ್ನಿನ ಮುಂದಿನ ಮೀಟಿಂಗಿನಲ್ಲಿ ಭಾರತದ ಸ್ವಾತಂತ್ರ್ಯಕ್ಕೆ ಲೇಬರ್ ಸರ್ಕಾರದ ಯೋಜನೆಯಲ್ಲಿ ತಾವು ಸೇರುವದಿಲ್ಲವೆಂಬ ಠರಾವನ್ನು ಚರ್ಚಿಲ್ಲರು ತರುವರೆಂದು ಹೇಳಲಾಗಿದೆ.

ಂ ಂ

ಲಂಡನ್, ಜು 31— ನವೆಂಬರ್‌ನಲ್ಲಿ ಭಾರತದ ಆಹಾರ ಪರಿಸ್ಥಿತಿ ಅತಿ ಭಯಾನಕವಾಗಿರುವುದೆಂದು ಬ್ರಿಟಿಷ್ ಆಹಾರ ಮಂತ್ರಿ ಮಂಡಳದ ಶ್ವೇತಪತ್ರ ತಿಳಿಸಿದೆ.

ಂ ಂ

ರಂಗೂನ್ ಆ 2 — ಬರ್ಮಾದಲ್ಲಿ ಜಪಾನೀಯರ ಕೈಗೊಂಬೆ ಸರ್ಕಾರದ ನಾಯಕ ಬಾಮಾವನ್ನು ತುಂಬಾ ಕರುಣೆ ತೋರಿಸಿ ಬಿಡುಗಡೆ ಮಾಡಲಾಗಿದೆ.

ಂ ಂ

ಮದರಾಸು, ಆ 2 — ಎಸ್ ಐ ಆರ್ ರೈಲ್ವೆ ಯೂನಿಯನ್ 26 ಕೇಳಿಕೆಗಳ ವಿನಂತಿಯನ್ನು ಜನರಲ್ ಮೇನೇಜರಿಗೆ ಕೊಟ್ಟಿರುವರು. ಅದರಂತೆ ಅನುಕೂಲ ಮಾಡಿಕೊಡದಿದ್ದರೆ ತಾ॥ 15ನೆ ದ 31 ರ ವಳಗೆ ಮುಷ್ಕರಿಸಿರುವರಂತೆ.

## ವಿಶ್ವಕರ್ನಾಟಕ ಸಂಪಾದಕರ ಸಾರ್ವಜನಿಕ ಹೇಳಿಕೆ

( ಹಿಂದಿನ ಸಂಚಿಕೆಯಿಂದ ಮುಂದುವರಿದದ್ದು )

ಈ ಘಟನೆಯು ಕೇವಲ ನ್ಯೆಯುಕ್ತಿಕವಾಗಿದ್ದರೆ ನಾನು ಪ್ರಸ್ತಾಪಿಸುತ್ತಲೇ ಇರಲಿಲ್ಲ. ಆಂದಿನ ಘಟನೆಯಲ್ಲಿ ಹೊರಬಿದ್ದ ಕೆಲವು ಅಂಶಗಳು ಪತ್ರಿಕಾ ವೃತ್ತಿಗೆ, ಸಾರ್ವಜನಿಕ ನಾಯಕತ್ವಕ್ಕೆ ,ಸರಕಾರದ ನಿರ್ಮಲತೆಗೆ ಸಂಬಂಧಪಟ್ಟಿದ್ದರಿಂದ ಇದನ್ನು ಬಹಿರಂಗಪಡಿಸಬೇಕಾಗಿದೆ. ಶ್ರೀ ಶಂಕರಲಿಂಗೇಗೌಡರ ಆಂದಿನ ವಾಗ್ಧೋರಣೆಯಲ್ಲಿ ಹೊರಬಿದ್ದ ಅಂಶಗಳಿವು

1 ಸರಕಾರವನ್ನು ಸಚಿವರನ್ನು ಪ್ರೇರೇಪಿಸಿ ತಮಗೆ ಇಷ್ಟವಿಲ್ಲದ ಪತ್ರಿಕಾಲಯಗಳ ಬಾಗಿಲು ಮುಚ್ಚಿಸಲಾಗುತ್ತೆ.

2 ಬ್ರಾಹ್ಮಣ—ಬ್ರಾಹ್ಮಣೇತರ ಕಹಿ ಪ್ರಸಂಗದಲ್ಲಿ ಬ್ರಾಹ್ಮಣೇತರ ನಾಯಕರ ಬೆಂಬಲ ಪಡದಂದ ಡಾವೃತ್ತಿದಂಡ ಪ್ರಭುತ್ವ ಆರಂಭಮಾಡಲಾಗುವುದು. ಹಣವುಳ್ಳವರನೇಕರು ತಮ್ಮ ಸಹಕಾರ ನೀಡಿ ಈ ಕಾರ್ಯಕ್ಕೆ ನೆರವಾಗುತ್ತಾರೆ ' ವಿಶ್ವಕರ್ನಾಟಕ' ಪತ್ರಿಕಾಲಯವೂ ಮತ್ತೊಂದು ಪತ್ರಿಕಾಲಯವೂ (?)ಶ್ರೀ ನೀಲಗಿರಿ ಸಂಜೀವಯ್ಯನವರು ಬೆಂಗಳೂರಿಗೆ ಹಿಂತಿರುಗಿದೊಡನೆಯೇ ಉಗ್ರಧಾಳಿಗೆ ತುತ್ತಾಗುತ್ತವೆ. ನಾವೆಲ್ಲಾ ಮಾತನಾಡಿಕೊಂಡೇ ಇಡ್ದೇವೆ. ನಿಮಗೆಲ್ಲಾ ಸರಿಯಾಗಿ ಮಾಡುತ್ತೇವೆ. ನಿಮ್ಮ ಕಛೇರಿಯಲ್ಲೇ ಸದೆಬಡಿಯುತ್ತೇವೆ.

ಹೀಗೆಲ್ಲಾ ಬರೆಯುವ ಪತ್ರಿಕೆಗಳವರಿಗೆ ಅಕೃತ್ಯಗಳಿಂದಲೇ ಬುದ್ಧಿ ಕಲಿಸಬೇಕು, ಅಂತೂ ಸೆಪ್ಟೆಂಬರ್ 30 ನೇ ತಾರೀಖಿನೊಳಗೆ ಈ ಪತ್ರಿಕೆಗಳ ಇರುವಿಕೆಯೇ ಇಲ್ಲದ್ದಂತಾಗಿದೆ.

3 ಕಾಂಗ್ರೆಸ್ಸಿನಲ್ಲಿರುವ ಒಕ್ಕಲಿಗರನ್ನು ಪ್ರೇರೇಪಿಸಿ ನಮ್ಮ ಕಾರ್ಯಾಚರಣೆಗೆ ಒಯ್ಯುತ್ತೇನೆ' ತನ್ನ ವೃತ್ತಿಜೀವನದ ಅಲ್ಪಕಾಲಾನುಭವದಿಂದ ಹೇಳುವುದಾದರೆ ಶ್ರೀ ಶಂಕರಲಿಂಗೇಗೌಡರ ಬೆದರಿಕೆಗಳು ಒಂದು ಕಪಟವಾಟಕವೆಂದು ತಿಳಿದಿದ್ದೇನೆ. ಮೊದಲನೆಯದಾಗಿ ಸರ್ಕಾರಿ ಉನ್ನತಾಧಿಕಾರಿಗಳ ಮತ್ತು ಮಾನ್ಯ ಸಚಿವರ ಪರಿಚಯ ನನಗೆ ಇದೆ. ಸರ್ಕಾರದ ವಿರುದ್ಧವಾಗಿ ಇಂತಹ ಉಗ್ರ ಟೀಕೆಯೆ ಬಂದರೂ ಅವರು ಹಿಂಸಾಪ್ರಚೋದಕರಿಗೆಲಾರರೆಂದು ನನ್ನ ಧೃತವಾದ ನಂಬಿಕೆ, ಎರಡನೆಯದಾಗಿ ನಮ್ಮ ಸುಸ್ಥಾನದ ಪ್ರಜಾ ನಾಯಕರು ನಾಗರೀಕತೆಯ ಒಂದು ಮಟ್ಟವನ್ನೇರಿದ್ದಾರೆ, ನಾನು ಕಾಂಗ್ರೆಸ್-ಕಾಂಗ್ರೆಸ್ಸೇತರ ಬ್ರಾಹ್ಮಣ ಬ್ರಾಹ್ಮಣೇತರ ನಾಯಕರುಗಳಲ್ಲಿ ಪರಿಚಿತನಾಗಿದ್ದೇನೆ. ಭಿನ್ನ ಭಿಪ್ರಾಯಂಗಳೇನೇ ಇರಲಿ ಈ ರಂಗಗಳಲ್ಲಿ ಸ್ನೇಹ ಸಹಕಾರ ಸಹಾಯಗಳನ್ನು ಕಂಡಿದ್ದೇನೆ. ಮೂರನೆಯದಾಗಿ ಕಾಂಗ್ರೆಸ್ಸಿಗರು ಅಹಿಂಸಾದಾರಿಗಳಾಗಿರುವುದರಿಂದ ಅವರು ಯಾವ ಸಾಧಾರಿಗಳಾಗಿರುವುದರಿಂದ ಅವರು ಯಾವ ಪಂಥದವರೇ ಆಗಿರಲಿ ಹಿಂಸಾ ಕೃತ್ಯ ಪ್ರಚೋದಕರಾಗಲಾರರು.

ಹೀಗಿರುವಲ್ಲಿ ಶ್ರೀ ಶಂಕರಲಿಂಗೇಗೌಡರು ಅವರೇ ಬೆದರಿಸಿ ಹೇಳಿದಂತೆ ಅವರ ಬೆನ್ನು ಹಿಂದೆ ನಿಂತಿರುವ ಶ್ರೀಮಂತರೂ ಹಾಕಿಕೊಂಡಿರುವ ' ಟೆರರಿಜಂ ' ಘಾತಕ ಕಾರ್ಯಕ್ರಮವನ್ನು ಆಚರಣೆಗೆ ತರಲು ಯಾವ ಲಗ್ನವನ್ನಿಟ್ಟು ಕೊಂಡಿರುವರೋ ಅದನ್ನು ತಿಳಿಯಲು ನಾನಂತೂ ಕುತೂಹಲನಾಗಿದ್ದೇನೆ. ನನ್ನಂತೆಯೇ ಸಾರ್ವಜನಿಕ ರಸ್ತೆಗಳಲ್ಲಿ ಓಡಾಡುವ ಮಾನಿಷ್ಟವಾದ ಜನರೆಲ್ಲ ಕುತೂಹಲತಾಳಿರುವರೆಂದೂ ನಾನು ಭಾವಿಸುತ್ತೇನೆ.

ಸಾರ್ವಜನಿಕರೂ ಸರ್ಕಾರದವರೂ ಪತ್ರಿಕಾ ವೃತ್ತಿಗಾರರೂ ಈ ವರ್ತನೆಯನ್ನು ನಿಷ್ಪಕ್ಷ ಪಾತವಾಗಿ ಪ್ರತಿಭಟಿಸುವರೆಂದು ನಾನು ನಂಬಿದ್ದೇನೆ. ಈ ಪತ್ರವನ್ನು ಮೇಲೆ ಸೂಚಿಸಿದ ಮೂರು ವರ್ಗದ ಪ್ರಮುಖರಿಗೂ ಕಳಿಸಿದ್ದೇನೆ.

ಎಂ. ಎಸ್. ಶಾಮಯ್ಯಂಗಾರ್
ಸಂಪಾದಕ
ವಿಶ್ವಕರ್ನಾಟಕ ( ವಾರಪತ್ರಿಕೆ )


## ಸ ತ್ಯ ವಾ ದಿ

**ದಿನ ಪತ್ರಿಕೆ. ತಿಂಗಳಿಗೆ ಆಠಾಣೆ**

ಸೋಮವಾರದ ಸಂಚಿಕೆ

ವಾರ್ಷಿಕಚಂದಾ

ಪರಸ್ಥಳಕ್ಕೆ ಅಂಚೆವೆಚ್ಚ ಸೇರಿ 1--12-0

## ಚ ಳಿ ಜ್ವ ರ ಕ್ಕೆ

ಉಚಿತವಾಗಿ ಔಷಧವನ್ನು
ಕೊಡಲಾಗುವುದು.

ಆ ಶೋ ಕಾ ಫಾ ರ್ಮ ಸಿ
ಲ್ಯಾನ್ಸ್‌ಡೌನ್‌ಬಜಾರ್, ಮೈಸೂರು

## ಅ ಕ ರ

ಸಾ ಮಾ ಜಿ ಕ

ಭಾವಪರಿಪೂರ್ಣವಾದ ಕಥೆ ಓದಲು ಪ್ರಾರಂಭಿಸಿದರೆ ಕಥೆ ಮುಗಿಸುವವರೆಗೂ ಊಟಕ್ಕೆ ಕೂಡ ಏಳಲು ಮನಸ್ಸಾಗುವುದಿಲ್ಲ. ಬೆಲೆ 6 ಆಣೆ, ಪೋಸ್ಟೇಜು 1 ಆಣೆ. ಮುಂಗಡ ಕಳುಹಿಸಬೇಕು.

ದೊರೆಯುವ ಸ್ಥಳ—

ಸತ್ಯವಾದಿ ಆಫೀಸ್, ಮೈಸೂರು

## ಸುಖ ಆರೋಗ್ಯ ಆನಂದದಾಯಕ ಶ ಜೀ ವಿ ತ ಕ್ಕೆ



**ಸ್ಟೀಮರ್ ಮಾರ್ಕಿನ ಉತ್ಕೃಷ್ಟ ಹಿಂಗಿನ ಪುಡಿ ಉಪಯೋಗಿಸಿ.**

ಈ ಹಿಂಗಿನ ಪುಡಿಯು ಅತ್ಯಂತ ಪರಿಶುದ್ಧವಾದುದು. ನೀರನ್ನು ಸೇರಿಸದೇ ತಯಾರಿಸಲ್ಪಟ್ಟಿದೆ. ಅತಿ ಘಸವಾದ ಗುಣವುಳ್ಳದ್ದು. ಎಲ್ಲಾ ಸನಾತನ ಸಂಸಾರಗಳಲ್ಲಿ ಉಪಯೋಗಿಸಲು ಅರ್ಹವಾದುದು. ಒಂದು ಚಿಕ್ಕ ಚಿಟಿಕೆಯಷ್ಟನ್ನು ತಯಾರಿಸುತ್ತಿರುವ ಆಹಾರ ಪಧಾರ್ಥಗಳಲ್ಲಿ ಹಾಕಿದಲ್ಲಿ ದೀರ್ಘವಾದ, ಸುಮನೋಹರವಾದ ವಾಸನೆಯನ್ನು ಕಲ್ಪಿಸುವುದಲ್ಲದೆ, ಹೆಚ್ಚು ರುಚಿಯನ್ನುಂಟು ಮಾಡುತ್ತದೆ. ಎಲ್ಲಾ ಶರೀರ ವ್ಯಾಧಿಗಳಿಗೂ ಒಂದು ಸಂಸಾರಿಕ ಔಷಧದಂತಿದೆ. ಒಂದು ಸಾರಿ ಉಪಯೋಗಿಸಿದ್ದಲ್ಲಿ ನಂಬಿಕೆಯುನ್ನುಂಟು ಮಾಡುವುದಲ್ಲದೆ, ಸದಾ ಅದನ್ನು ಉಪಯೋಗಿಸುವಂತೆ ಮನಗೊಳಿಸುವುದು. ಎಲ್ಲಾ ಪ್ರಮುಖ ವ್ಯಾಪಾರಿಗಳಲ್ಲೂ ಒಂದು, ಅರ್ಧ, ಕಾಲು ಪೌಂಡು ಮತ್ತು ಒಂದು ಸಲಂ ಪ್ಯಾಕೆಟ್ಟುಗಳಲ್ಲಿ ದೊರೆಯುತ್ತದೆ. ಬೆಲೆ ಒಂದು ಪೌಂಡಿಗೆ ರೂ. 3-8-0 ಮಾತ್ರ.

ನಮ್ಮ ಸುಘಂದ ಅಡಿಕೆಪುಡಿ ಒಂದು ವೈಶಿಷ್ಟ್ಯ.

ನಮ್ಮ ಶ್ರೀ ಓಂ ಗುರುತಿನ ಕೇಸರಿ ಅತ್ಯಂತ ಪರಿಶುದ್ಧವಾದ ಖಾತರಿಯಾದುದು. ವಿವರಗಳಿಗೆ ಮತ್ತು ಸ್ಯಾಂಪಲಿಗೆ ಬರೆಯಿರಿ —

**ವಲ್ಲಭದಾಸ್ ತೇಜ್‌ಪಾಲ್,**
( ಹಿಂಗು, ಕೇಸರಿ ಮತ್ತು ಕಿರಾಣ ವ್ಯಾಪಾರಿಗಳು )
**೧೪. ಗೋವಿಂದಪ್ಪ ನಾಯಕ್ ರಸ್ತೆ, ಜಿ. ಟಿ. ಮದರಾಸು.**

## ಶ ಕ್ತಿ ಸು ಧಾ

**ರಕ್ತವೃದ್ಧಿಗೆ, ಧಾತುಪುಷ್ಟಿಗೆ ಸಂಜೀವನ**

ನಿಸ್ಸಾರವಾದ, ನತಿಸಿರುವ ದೇಹಕ್ಕೆ ನವಚೈತನ್ಯವನ್ನು ಕೊಡುವುದರಲ್ಲಿ ಅದ್ವಿತೀಯವಾದುದು.

ವಿಳಾಸ — ಶಕ್ತಿಸುಧಾ, 1067 ಚಾಮರಾಜಪುರಂ, ಮೈಸೂರು

## S H A K T I
## S U D H A

**For Rich Blood, Strong Nerves & Exuberant Vitality**


Edited, Printed and Published by M. S. Krishna Rao, at Satyavadi Press, Chamaraja Agrahar, Mysore